ಶ್ರೀ ಬಿ. ನಂಜಾಮರಿ : ಅಲ್ಲಿರತಕ್ಕ ಕೆರೆಗೆ ಯಾವುದೇ ನೀರಿನ ಸೋರ್ಸ್ ಇಲ್ಲ. ಆ ಕೆರೆ ಮುಳುಗಿ ಹೋಗುತ್ತದೆಂದು ಹೇಳುತ್ತಾರೆ. ನಾವು ಆ ಜಮೀನು ಕೊಡಿಸಿದ ತಕ್ಷಣ, ಬಸ್ ಡಿಪೋ ಮಾಡಿಸಿಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಜಮೀನು ಕೊಡತಕ್ಕ ವ್ಯವಸ್ಥೆ ನಾವು ಮಾಡುತ್ತೇವೆ ನೀವು, ಜಮೀನು ಕೊಟ್ಟತಕ್ಷಣ ಕೆಲಸ ಪ್ರಾರಂಭ ಮಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಖಾಸಗಿಯವರಿಂದ ತೆಗೆದುಕೊಳ್ಳುವಂಥಾದ್ದು ಇದ್ದರೆ, ಅದು ಬೇರೆ ವಿಚಾರ. ನಾನು ಹೇಳುವಂಥಾದ್ದು ಏನೆಂದರೆ ಅದು ಸಣ್ಣ ನೀರಾವರಿ ಇಲಾಖೆಯ ಜಮೀನು. ಅದನ್ನು ಸಾರಿಗೆ ಸಂಸ್ಥೆಗೆ ವರ್ಗಾವಣೆ ಮಾಡಿಕೊಳ್ಳುವುದಕ್ಕೆ ನಾನು ಮಾನ್ಯ ಮಂತ್ರಿಗಳಿಗೆ ವಿನಂತಿ ಮಾಡಿ ಕೊಳ್ಳುತ್ತೇನೆ. ಸರ್ಕಾರ ಎಂದರೆ, ನಾನು ಬೇರೆ, ಅವರು ಬೇರೆ ಅಲ್ಲ, ನಾವೆಲ್ಲಾ ಒಂದೇ. ಈ ವಿಷಯ ಸಚಿವ ಸಂಪುಟಕ್ಕೆ ಬರಬೇಕಾಗುತ್ತದೆ. ಆದ್ದರಿಂದ ಇದನ್ನು ವಿಚಾರ ಮಾಡುತ್ತೇನೆ. ರಾಷ್ಟ್ರೀಕರಣವಾಗಿರತಕ್ಕ ಜಿಲ್ಲೆಗಳಿಗೆ ನಾವು ಮೊದಲ ಆದ್ಯತೆ ಕೊಡಬೇಕಾಗುತ್ತದೆ. ಎರಡನೇ ಆದ್ಯತೆಯನ್ನು ಶಿವಮೊಗ್ಗ, ತುಮಕೂರು, ಕೋಲಾರ-ಇಂತಹ ಜಿಲ್ಲೆಗಳಿಗೆ ಕೊಡಬೇಕಾಗುತ್ತದೆ. ಆದ್ದರಿಂದ ನಾನು ಹೇಳಿದ್ದೇನೆ, ಇದನ್ನು ಪರಿಶೀಲನೆ ಮಾಡುತ್ತೇನೆ.

ಲಾಲ್ ಬಾಗ್‌ಗೆ ಪ್ರವೇಶ ಶುಲ್ಕ.

288 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಾಲ್‌ಬಾಗ್ ಉದ್ಯಾನವನದ ಒಟ್ಟು ವಿಸ್ತೀರ್ಣವೆಷ್ಟು?

ಆ) ಈ ಉದ್ಯಾನವನದಲ್ಲಿ ಇರತಕ್ಕ ಗಿಡಮರಗಳ ಸಂಖ್ಯೆ ಎಷ್ಟು?

ಇ) 1997-98ನೇ ಸಾಲಿನಲ್ಲಿ ಸದರಿ ಉದ್ಯಾನವನದ ಅಭಿವೃದ್ಧಿಗಾಗಿ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು?

ಈ) ಸದರಿ ಉದ್ಯಾನವನದಲ್ಲಿ ತೋಟಗಾರಿಕೆ ಕಛೇರಿ ಇರುವುದು ನಿಜವಲ್ಲವೇ?

ಉ) ಸದರಿ ಕಛೇರಿಗಳನ್ನು ಬೇರೆ ಜಾಗಕ್ಕೆ ವರ್ಗಾಯಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಊ) ಸದರಿ ಉದ್ಯಾನವನಕ್ಕೆ ಪ್ರವೇಶ ಶುಲ್ಕ ವಿಧಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಋ) ಉದ್ಯಾನವನಕ್ಕೆ ಬರತಕ್ಕ ಪ್ರವಾಸಿಗರಿಗೆ ಸೂಕ್ತ ರಕ್ಷಣೆ ಒದಗಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ. ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಲಾಲ್‌ಬಾಗ್ ಸಸ್ಯತೋಟದ ವಿಸ್ತೀರ್ಣ 20 ಎಕರೆಗಳು.

ಆ) ಈ ಸಸ್ಯ ತೋಟದಲ್ಲಿ 1854 ವಿವಿಧ ಜಾತಿಯ ಸಸ್ಯ ಬೇಧಗಳಿವೆ ಹಾಗೂ ಒಟ್ಟು ಗಿಡಮರಗಳ ಸಂಖ್ಯೆ : 5150

ಇ) 1997-98ನೇ ಸಾಲಿನಲ್ಲಿ ಲಾಲ್‌ಬಾಗ್ ಸಸ್ಯ ತೋಟದ ಅಭಿವೃದ್ಧಿಗೆ ಯೋಜನೆ ಅಡಿಯಲ್ಲಿ 4.00 ಲಕ್ಷ ರೂಗಳನ್ನು ಇದೂವರೆಗೆ ಖರ್ಚುಮಾಡಲಾಗಿದೆ.

ಈ) ಹೌದು.

ಉ) ಇಲ್ಲ.

ಊ) ಇಲ್ಲ.

ಋ) 1) ತೋಟಗಾರರನ್ನು ವಿವಿಧ ಭಾಗಗಳಲ್ಲಿ ನೇಮಿಸಿ ಇಲಾಖೆಯ ಆಸ್ತಿ ರಕ್ಷಣೆ ಹಾಗೂ ಪ್ರವಾಸಿಗರ ರಕ್ಷಣೆಯ ಕಾರ್ಯ ಕೈಗೊಳ್ಳಲಾಗುತ್ತಿದೆ.

2) ಖಾಸಗಿ ಸೆಕ್ಯೂರಿಟಿಯನ್ನು ಎಲ್ಲಾ ದ್ವಾರಗಳಲ್ಲೂ ಹಗಲು ಮತ್ತು ರಾತ್ರಿ ವೇಳೆಯಲ್ಲಿ ವ್ಯವಸ್ಥೆ ಮಾಡಲಾಗಿದೆ.

3) ಪೋಲೀಸ್ ಇಲಾಖೆಯ ವತಿಯಿಂದ ಸಸ್ಯ ತೋಟದಲ್ಲಿ ದಿನನಿತ್ಯ ಗಸ್ತು ತಿರುಗುವ ವ್ಯವಸ್ಥೆ ಮಾಡಲಾಗಿದೆ.

4) ಲಾಲ್‌ಬಾಗ್ ಸಸ್ಯ ತೋಟದ ಮುಖ್ಯ ದ್ವಾರದಲ್ಲಿ ಒಂದು ಪೋಲೀಸ್ ಔಟ್‌ಪೋಸ್ಟ್ ತೆರೆಯಲು ಕ್ರಮಕೈಗೊಳ್ಳಲಾಗುತ್ತಿದೆ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೆ, 1997-98ನೇ ಸಾಲಿನಲ್ಲಿ ಲಾಲ್‌ಬಾಗಿನ ಅಭಿವೃದ್ಧಿಗೆ ಎಷ್ಟು ಹಣವನ್ನು ಖರ್ಚುಮಾಡುತ್ತೀರಾ ಎಂದು ಕೇಳಿದ್ದೆ. ಅವರು ಕೇವಲ 4 ಲಕ್ಷ ರೂಪಾಯಿ ತೋರಿಸಿದ್ದಾರೆ. ಲಾಲ್‌ಬಾಗ್ ಸುಮಾರು 240 ಎಕರೆ ಇರತಕ್ಕ ಪ್ರದೇಶದಲ್ಲಿ 4 ಲಕ್ಷ ಯಾವುದಕ್ಕೂ ಸಾಕಾಗುವುದಿಲ್ಲ. ಅದು ನಮ್ಮ ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಪ್ರತಿಷ್ಠವಾದಂಥ ಒಂದು ಉದ್ಯಾನವನ. ಪ್ರತಿದಿನ ಸಾವಿರಾರು ಜನ ಬಂದು ಹೋಗತಕ್ಕ ಒಂದು ಉದ್ಯಾನವನ. ಇದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅದೇರೀತಿ ಸನ್ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಅಲ್ಲಿ ಕೆರೆ ಇದೆ. ಆ ಕೆರೆಗೆ ಬಸವನಗುಡಿ ಅಂದರೆ ಕನಕನಪಾಳ್ಯ ಏನಿದೆ ಅಲ್ಲಿಂದ ಸ್ಯಾನಿಟರಿ ನೀರು ಬರುತ್ತೆ. ಹಿಂದೆ ಕೂಡ ಅಂದರೆ ಕಳೆದ ಎರಡು ವರ್ಷಗಳಲ್ಲಿ ಅಸೆಂಬ್ಲಿಯಲ್ಲಿ ಇದನ್ನು ಪ್ರಶ್ನೆ ಮಾಡಿದ್ದೆ. ಈ ಸ್ಯಾನಿಟರಿ ನೀರು ಈಗಲೂ ಬರುತ್ತಲೇ ಇದೆ. ಮೊನ್ನೆ ಪೇಪರಿನಲ್ಲೂ ತಾವು ಓದಿರಬಹುದು. ಆ ಕೆರೆಯಲ್ಲಿರತಕ್ಕ ಮೀನುಗಳೆಲ್ಲಾ ಸತ್ತುಹೋಗಿವೆ. ಮತ್ತೆ ಅಲ್ಲಿ ಜೊಂಡು ಬೆಳೆದುಕೊಂಡಿದೆ. ಸುಮಾರು 5-6 ವರ್ಷಗಳಿಂದ ಆ ಕೆರೆಯನ್ನು ಕ್ಲೀನ್ ಮಾಡಿಲ್ಲ. ಪ್ರತಿದಿನ ಬೆಳಗಿನ

ವೇಳೆ ವಾಕಿಂಗ್ ಹೋಗುವವರಿಗೆ, ಸುಮಾರು ಒಂದು ನೂರು ನಾಯಿಗಳ ಕಾಟ ಅಲ್ಲಿದೆ. ಅಲ್ಲಿ ವಾಕಿಂಗ್ ಹೋಗುವವರು ಕಡ್ಡಾಯವಾಗಿ ಕೈಯಲ್ಲಿ ಕೋಲು ಹಿಡಿದುಕೊಂಡು ಹೋಗಬೇಕು. ಅಂತಹ ಪರಿಸ್ಥಿತಿ ಇದೆ. ಇದನ್ನು ತಾವು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ನಾನು ಮೊನ್ನೆ ಪೇಪರಿನಲ್ಲಿ ಓದಿದೆ. ಲಾಲ್‌ಬಾಗ್ ಪ್ರವೇಶಕ್ಕೆ, ಪ್ರವೇಶ ಶುಲ್ಕ ಮಾಡುತ್ತೇವೆಂದು ಹೇಳಿದ್ದೀರಿ. ಅದರ ಬಗ್ಗೆಯೂ ಕ್ಲಾರಿಫಿಕೇಶನ್ ಕೊಡಬೇಕೆಂದು ಸನ್ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ 4 ಲಕ್ಷ ರೂಪಾಯಿ ಅಲ್ಲ. ಏಪ್ರಿಲ್ ಒಂದನೇ ತಾರೀಖಿನಿಂದ ಇದುವರೆಗೆ 4 ಲಕ್ಷ ರೂಪಾಯಿ ಖರ್ಚಾಗಿರುತ್ತದೆಂದು ಹೇಳಿದ್ದೇವೆ. ಲಾಲ್‌ಬಾಗಿನ ಅಭಿವೃದ್ಧಿಗೋಸ್ಕರ 1997-98ನೇ ಸಾಲಿನಲ್ಲಿ ಒಟ್ಟು 23 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದೇವೆ. ಅದರಲ್ಲಿ ಇದುವರೆಗೆ 4 ಲಕ್ಷ ರೂಪಾಯಿ ಖರ್ಚಾಗಿದೆ, ಬರೀ 4 ಲಕ್ಷ ರೂಪಾಯಿಗಳನ್ನು ಇಟ್ಟಿಲ್ಲ. ಮತ್ತೆ ಸ್ಯಾನಿಟರಿ ವಾಟರ್ ಅಲ್ಲಿನ ಕೆರೆಗೆ ಬರುತ್ತಿದೆ ಎಂದು ಹೇಳಿದರು. ನಾನು ಕೂಡ ಸ್ಥಳ ಪರಿಶೀಲನೆ ಮಾಡಿ, ಸಂಬಂಧಪಟ್ಟ ಅಧಿಕಾರಿಗಳು ಮತ್ತು ಬಿ.ಡಬ್ಲ್ಯು.ಎಸ್.ಎಸ್.ಬಿ. ಅಧಿಕಾರಿಗಳನ್ನು ಕರೆಯಿಸಿ, ಅಲ್ಲಿ ನೀರು ಬರದ ರೀತಿಯಲ್ಲಿ ಬೇರೆ ಕಡೆ ಡೀವಿಯೇಟ್ ಮಾಡಿ, ಯಾವುದೇ ರೀತಿಯನಲ್ಲಿ ಕೆರೆಯೊಳಗೆ ಬರಬಾರದು ಎಂಬ ಬಗ್ಗೆ ನಾನು ಕ್ರಮವನ್ನು ತೆಗೆದು ಕೊಂಡಿದ್ದೆ. ನಾನೂ ಕೂಡ ತನಿಖೆ ಮಾಡಿದಾಗ, ಅದೆಲ್ಲಾ ಸ್ಟಾಪ್ ಆಗಿತ್ತು. ಇತ್ತೀಚೆಗೆ ಏನಾದರೂ ಮತ್ತೆ ಬರುತ್ತಿದೆಯೇ ಎಂಬುದನ್ನು ಪರಿಶೀಲನೆ ಮಾಡಿ ಒಂದುವೇಳೆ ನೀರು ಬರುತ್ತಾ ಇದ್ದರೆ, ಅದನ್ನು ನಿಲ್ಲಿಸುವುದಕ್ಕೆ ಎಲ್ಲಾ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಮತ್ತು ಪ್ರವೇಶ ಶುಲ್ಕ ಕೊಡುವ ಬಗ್ಗೆ ಹೇಳುತ್ತೇನೆ. ಮಾನ್ಯ ರಾಮಲಿಂಗರೆಡ್ಡಿಯವರೂ ಕೂಡ ಅನೇಕ ಸಲ ವಿದೇಶ ಪ್ರವಾಸಕ್ಕೆ ಹೋಗಿರಬಹುದು. ಇದು ಬರೀ ಪಾರ್ಕ್ ಅಲ್ಲ. ಲಾಲ್‌ಬಾಗ್ ಎಂಬುದು ಒಂದು ಸಸ್ಯತೋಟ. ಈ ಸಸ್ಯತೋಟದ ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ಬರಬೇಕು. ಅದನ್ನು ಪುಂಡರು, ಪೋಕರು ಎಲ್ಲಾ ಬಂದು ಹಾಳು ಮಾಡಬಾರದು. ಸ್ವೇಚ್ಛಾತಿಯಲ್ಲಿ ತಿರುಗಾಡಬಾರದೆಂಬ ದೃಷ್ಟಿಯಿಂದ, ಅದನ್ನು ಕಂಟ್ರೋಲ್ ಮಾಡಬೇಕು ಮತ್ತು ಅಭಿವೃದ್ಧಿಗೆ ಹಣ ಸಾಕಾಗುತ್ತಾ ಇಲ್ಲ. ಆದ್ದರಿಂದ, ಅಲ್ಲಿಯೇ ಹಣ ವಸೂಲಿಮಾಡಿ, ಅಭಿವೃದ್ಧಿ ಮಾಡಬೇಕೆಂಬ ಕಾರಣದಿಂದ ಮಾಡುತ್ತಿದ್ದೇವೆ. ಊಟಿಯಲ್ಲಿರತಕ್ಕ ಸಸ್ಯ ತೋಟಕ್ಕೂ ಕೂಡ ಪ್ರವೇಶ ಶುಲ್ಕ ಮಾಡಿದ್ದೇವೆ.

ಅಧ್ಯಕ್ಷರು : ಪುಂಡರು, ಪೋಕರುಗಳೂ ಟಿಕೆಟ್ ತೆಗೆದುಕೊಂಡು ಒಳಗಡೆ ಬಂದರೆ ಏನು ಮಾಡುತ್ತೀರಿ?

ಶ್ರೀ ಡಿ.ಟಿ. ಜಯಕುಮಾರ್ : ಸ್ವಲ್ಪ ನಿಯಂತ್ರಣ ಮಾಡುವುದಕ್ಕಾಗಿ ಈ ಕೆಲಸ ಮಾಡುತ್ತಿದ್ದೇವೆ. ಅದರ ಸಾಧಕ ಬಾಧಕಗಳನ್ನು ನೋಡಲಿಕ್ಕೆ ಪತ್ರಿಕೆಗಳಿಗೆ ಬಿಡುಗಡೆ ಮಾಡಿದ್ದೇವೆ. ಇನ್ನೂ ಕೂಡ ಅದರ ಬಗ್ಗೆ ತೀರ್ಮಾನ ತೆಗೆದುಕೊಂಡಿಲ್ಲ. ಸಾರ್ವಜನಿಕರು, ಕೆಲವರು ಪ್ರವೇಶ ಶುಲ್ಕ ಹಾಕುವುದು ಒಳ್ಳೆಯದು ಎಂದು ಹೇಳುತ್ತಾರೆ, ಕೆಲವರು ಹಾಕುವುದು ಬೇಡವೆಂದು ಹೇಳುತ್ತಾರೆ. ಈ ವಿಷಯವನ್ನು

ಸಚಿವ ಸಂಪುಟದ ಮುಂದೆ ತಂದು, ಪ್ರವೇಶ ಶುಲ್ಕ ಹಾಕಬೇಕೇ ಅಥವ ಬೇಡವೇ ಎಂಬ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಜೊತೆಗೆ, ಇನ್ನೊಂದು ವಿಷಯ ತಾವು ಕೇಳಿದ್ದೀರಿ. ನಾಯಿಗಳ ಕಾಟ ಜಾಸ್ತಿಯಾಗಿದೆ ಎಂದು ಹೇಳಿದಿರಿ. ಮೊದಲೆಲ್ಲಾ ಜನಗಳ ಕಾಟ ಜಾಸ್ತಿಯಾಗಿ ಅನೈತಿಕ ವ್ಯವಹಾರಗಳು ನಡೆಯುತ್ತಿವೆ ಎಂದು ಹೇಳಿದ್ದರಿಂದ, ನಾವು ಅಲ್ಲಿ ಪೋಲೀಸಿನವರನ್ನು ಹಾಕಿ ಮತ್ತೆ ಪ್ರೈವೇಟ್ ಸೆಕ್ಯೂರಿಟಿಯವರನ್ನು ಹಾಕಿ ಅದನ್ನು ಸ್ವಲ್ಪ ನಿಯಂತ್ರಣಕ್ಕೆ ತಂದಿದ್ದೇವೆ. ಈ ನಾಯಿಗಳ ಕಾಟ ನನಗೆ ಗೊತ್ತಿರಲಿಲ್ಲ, ಅವುಗಳನ್ನೂ ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ರಾಮಲಿಂಗರೆಡ್ಡಿ : ಆ ಕೆರೆಯಲ್ಲಿ ಹೂಳು ಇದೆ, ಆ ಹೂಳನ್ನು ತೆಗೆದು ಬಹಳ ವರ್ಷಗಳಾಯಿತು. ಮತ್ತೆ ಬೆಳಿಗ್ಗೆ ವಾಕಿಂಗ್ ಹೋಗುವವರಿಗೆ ಒಂದು ಟೈಮ್ ನಿಗದಿಮಾಡಿ, ಅವರಿಗೆ ಪ್ರವೇಶ ಶುಲ್ಕ ವಿಧಿಸಬಾರದು. ಬೇರೆಯವರಿಗೆ ಹಾಗಿ ನಮ್ಮದೇನೂ ಅಭ್ಯಂತರವಿಲ್ಲ 9 ಗಂಟೆಯ ಮೇಲೆ ಯಾರು ಬರುತ್ತಾರೆ, ಅವರಿಗೆ ಶುಲ್ಕ ಹಾಕಿ. ಕೊನೇಪಕ್ಷ 8 ಗಂಟೆಯವರೆಗೆ ಯಾರು ವಾಕ್ ಮಾಡುತ್ತಾರೋ ಅವರಿಗೆ ಪ್ರವೇಶ ಶುಲ್ಕದಿಂದ ವಿನಾಯಿತಿ ಕೊಡಬೇಕು.

ಅಧ್ಯಕ್ಷರು : ಇದು ಒಳ್ಳೆಯ ಸಲಹೆ. ಬೆಳಗಿನ ವೇಳೆಯಲ್ಲಿ ವಾಕ್ ಹೋಗುವವರು ಟಿಕೆಟ್ ತೆಗೆದುಕೊಂಡು ಹೋಗುವಹಾಗೆ ಮಾಡಬೇಡಿ.

ಶ್ರೀ ಡಿ.ಟಿ. ಜಯಕುಮಾರ್ : ನಾನು ಇದರ ಬಗ್ಗೆ ಚರ್ಚೆ ಮಾಡಿದ್ದೇನೆ. ನಮಗೇನೂ ದುಡ್ಡಿಗೆ ತೊಂದರೆಯಿಲ್ಲವೆಂದು ಹೇಳಿದ್ದಾರೆ. 9 ಗಂಟೆಯಿಂದ ಸಾಯಂಕಾಲ 6 ಗಂಟೆಯವರಿಗೆ ಮಾತ್ರ ಪ್ರವೇಶ ಶುಲ್ಕ, ಅದರ ಹಿಂದೆ ಅಥವಾ ಮುಂದೆ ಹೋಗುವವರ ಬಗ್ಗೆಯೂ ಪರಿಶೀಲಿಸಿ ಯಾವುದು ಸೂಕ್ತ ಎಂಬುದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

ಸರ್ಕಾರದಿಂದ ಆಲೂಗೆಡ್ಡೆ ಮತ್ತು ಈರುಳ್ಳಿ ಖರೀದಿ.

290 - ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷ ಆಲೂಗಡ್ಡೆ ಹಾಗೂ ಈರುಳ್ಳಿ ಬೆಲೆ ಕುಸಿತಗೊಂಡಿದ್ದರಿಂದ ರೈತರ ಹಿತಾಸಕ್ತಿ ಕಾಪಾಡಲು ಮಾರುಕಟ್ಟೆ ಮಧ್ಯಪ್ರವೇಶ ಯೋಜನೆ ಅನ್ವಯ ಬಹಿರಂಗ ಮಾರುಕಟ್ಟೆಯಲ್ಲಿ ಖರೀದಿಸಲು ಕೈಗೊಂಡ ಕ್ರಮವೇನು?

ಆ) ಒಟ್ಟು ಎಷ್ಟು ಮೊತ್ತ ಪ್ರಮಾಣದ ಸರಕು ಖರೀದಿಸಲಾಯಿತು. ಎಷ್ಟು ಮಾರಾಟ ಮಾಡಲಾಯಿತು.

ಇ) ಈ ಖರೀದಿ ವ್ಯವಹಾರದಲ್ಲಿ ಅವ್ಯವಹಾರವಾಗಿ ಕೇವಲ ಕೆಲವು ದಿನ ಮಾತ್ರ ಖರೀದಿಸಿ ಉಳಿದಂತೆ ಖರೀದಿಸದೇ ಇದ್ದುದರ ಫಲವಾಗಿ ರೈತರು ನಷ್ಟ ಅನುಭವಿಸುವಂತಾದದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?